ಪ್ರದೇಶದಲ್ಲಿರುವ ಎಲ್ಲಾ ರಸ್ತೆಗಳು ಹಾಳಾಗಿದ್ದು ಸಂಚಾರಕ್ಕೆ ತುಂಬಾ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ಅಲ್ಲಿನ ರಸ್ತೆಗಳನ್ನು ದುರಸ್ತಿ ಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ. ಲೋಕೋಪಯೋಗಿ ಇಲಾಖೆಗೆ ಬರುವ ರಸ್ತೆಗಳು ಹಲವಡೆ ಮಳೆಗೆ ಹಾಳಾಗಿರುವುದು ಗಮನಕ್ಕೆ ಬಂದಿದೆ.

ಆ. ವಾಹನಗಳ ಸಂಚಾರಕ್ಕೆ ಅಡಚಣೆಯಾಗದಂತೆ ರಸ್ತೆಗಳ ದುರಸ್ತಿಗೆ ತುರ್ತು ಕ್ರಮ ತೆಗೆದುಕೊಳ್ಳಲಾಗಿದೆ.

ಇ.ಎಸ್.ಐ.ಯೋಜನೆಯಡಿಯಲ್ಲಿ ಬರುವ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯ.

2900:(3919)

ಶ್ರೀ ಡಿ.ಆರ್.ಪಾಟೀಲ (ಗದಗ್) ಮಾನ್ಯ ಕಾರ್ಮಿಕ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಐ.ಎಸ್.ಐ. ಯೋಜನೆಯಡಿಯಲ್ಲಿ ಬರುವ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಈ ಕಾರ್ಮಿಕರ ವೈದ್ಯಕೀಯ ಸೌಲಭ್ಯಕ್ಕಾಗಿ ವೆಚ್ಚವಾಗುವ ಒಟ್ಟು ಮೊತ್ತ ಎಷ್ಟು;

ಇ) ಈ ಕಾರ್ಮಿಕರ ಸೌಲಭ್ಯಕ್ಕಾಗಿ ಇರುವ ಆಸ್ಪತ್ರೆಗಳೆಷ್ಟು; ಮೀಸಲಾಗಿರುವ ಹಾಸಿಗೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಈ) ಈ ಕಾರ್ಮಿಕರ ವಿಮೆಗಾಗಿ ಮಾಡಲಾಗುವ ಒಟ್ಟು ಮೊತ್ತ ಎಷ್ಟು;

ಉ) ಈ ಕಾರ್ಮಿಕರ ಇತರೇ ಸೌಲಭ್ಯಗಳಿಗಾಗಿ ಮಾಡಲಾಗುವ ಒಟ್ಟು ವೆಚ್ಚ ಎಷ್ಟು?

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ)7,34,600 ವಿಮಾದಾರರು. (ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ

ಒದಗಿಸಿದೆ)

ಆ) 1997-98ನೇ ಸಾಲಿನ ವೆಚ್ಚ ರೂ. 30.65 ಕೋಟಿಗಳು.

ಇ) 07 ಪೂರ್ಣಕಾಲಿಕ ಆಸ್ಪತ್ರೆಗಳು.

03 ಅನುಬಂಧ ಆಸ್ಪತ್ರೆಗಳು.

131 ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯಗಳು ಮತ್ತು 12 ಕಾರ್ಮಿಕ ಸೌಲಭ್ಯದ ಚಿಕಿತ್ಸಾಲಯಗಳು.

600 ಹಾಸಿಗೆಗಳನ್ನು ಇತರೆ ಆಸ್ಪತ್ರೆಗಳಲ್ಲಿ ಕಾಯ್ದಿರಿಸಲಾಗಿದೆ.

(ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ)

ಈ) ಈ ಕಾರ್ಮಿಕರ ವಿಮೆಗಾಗಿ ಹಣವನ್ನು ಖರ್ಚು ಮಾಡಲಾಗುತ್ತಿಲ್ಲ.

ಉ) 1997-98ನೇ ಸಾಲನಲ್ಲಿ ರೂ. 10.31 ಕೋಟಿಗಳು.

ಅನುಬಂಧ- 1

ಜಿಲ್ಲಾವಾರು ವಿಮಾದಾರರ ವಿವರ.

ಕ್ರ.ಸಂ.	ಜಿಲ್ಲೆ	ವಿಮಾದಾರರ ಸಂಖ್ಯೆ
1.	ಬೆಂಗಳೂರು	5,38,900
2.	ದಾವಣಗೆರೆ	52,735
3.	ಮೈಸೂರು	36,957
4.	ಮಂಗಳೂರು (ದಕ್ಷಿಣ ಕನ್ನಡ)	23,100
5.	ಧಾರವಾಡ	19,050
6.	ಗುಲ್ಬರ್ಗಾ	13,750
7.	ಬೆಳಗಾಂ	11,732
8.	ತುಮಕೂರು	8,200
9.	ಉಡುಪಿ	6,600
10.	ಗದಗ	5,250
11.	ಮಂಡ್ಯ	3,671
12.	ಶಿವಮೊಗ್ಗ	3,650
13.	ಬಳ್ಳಾರಿ	3,129
14.	ಕೋಲಾರ	2,700
15.	ಚಿತ್ರದುರ್ಗ	1,580
16.	ಹಾಸನ	1,450
17.	ಬಜಾಪುರ	850
18.	ಬಾಗಲಕೋಟೆ	571
19.	ರಾಯಚೂರು	518
20.	ಚಾಮರಾಜನಗರ	207
	ಒಟ್ಟು	7,34,600

ಅನುಬಂಧ-2

(ವಿಮಾದಾರರಿಗೆ ಕಾಯ್ದಿರಿಸಲಾದ ಹಾಸಿಗೆಗಳ ಜಿಲ್ಲಾವಾರು ವಿವರ)

ಜಿಲ್ಲೆ	ಸರ್ಕಾರಿ: ಅನುಬಂಧ: ಕಾರ್ಮಿಕ ಸೌಲಭ್ಯದ ಆಸ್ಪತ್ರೆಯಲ್ಲಿ ಕಾಯಿರಿಸಿದ ಹಾಸಿಗೆ ಸಂಖ್ಯೆ:
ಬೆಂಗಳೂರು	280
ಬೆಳಗಾಂ	15
ಬಳ್ಳಾರಿ	18
ಬಿಜಾಪುರ	05
ಬಾಗಲಕೋಟೆ	04
ಚಿತ್ರದುರ್ಗ	06
ದಾವಣಗೆರೆ	39
ಧಾರವಾಡ	29
ಗದಗ	12
ಗುಲ್ಬರ್ಗಾ	20
ಹಾಸನ	08
ಕೋಲಾರ	32
ಮೈಸೂರು	45
ಚಾಮರಾಜನಗರ	04
ಮಂಡ್ಯ	03
ರಾಯಚೂರು	09
ಶಿವಮೊಗ್ಗ	04
ದಕ್ಷಿಣ ಕನ್ನಡ	45
ಉಡುಪಿ	08
ಉತ್ತರಕನ್ನಡ	02
ತುಮಕೂರು	04
	600